## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಪಿಟಿಷನ್ ಸಂಖ್ಯೆ:16751/2012 ರೊಂದಿಗೆ ಜೊತೆಗೂಡಿಸಿದ ಸ್ಪೆಷಲ್ ಲೀವ್ ಪಿಟಿಷನ್ (ಸಿಆರ್‌ಎಲ್) ಸಂಖ್ಯೆ:913/2011ರ ಸಂಬಂಧ ಶ್ರೀ ಸಿ.ಜಗದೀಶ್, ವಿಶೇಷ ನ್ಯಾಯವಾದಿ ಇವರನ್ನು ದೆಹಲಿಗೆ ನಿಯೋಜಿಸುವ ಬಗ್ಗೆ.

ಓದಲಾಗಿದೆ:- ಅಪರ ಪೊಲೀಸ್ ಮಹಾ ನಿರ್ದೇಶಕರು, ನಾಹಜಾನಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿಬಿ/ಎಡಿಜಿಪಿ/ಡಿಸಿಆರ್‌ಇ/2012 ದಿನಾಂಕ: 29.12.2012

*****

ಪ್ರಸ್ತಾವನೆ:

ಅಪರ ಪೊಲೀಸ್ ಮಹಾ ನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರು ಮೇಲೆ ಓದಲಾದ ದಿನಾಂಕ: 29.12.2012ರ ಪತ್ರದಲ್ಲಿ ಭಾರತ ಸರ್ವೋಚ್ಚ ನ್ಯಾಯಲಯದಲ್ಲಿ ಕರ್ನಾಟಕ ಸರ್ಕಾರದಿಂದ ದಾಖಲಿಸಲಾಗಿರುವ ಕ್ರಿಮಿನಲ್ ಪಿಟಿಷನ್ ಸಂಖ್ಯೆ: 16751/2012ಕ್ಕೆ ಜೊತೆಗೂಡಿಸಿದ ಸ್ಪೆಷಲ್ ಲೀವ್ ಪಿಟಿಷನ್ (ಸಿಆರ್‌ಎಲ್) ಸಂಖ್ಯೆ 913/2011ಕ್ಕೆ ಸಂಬಂಧಿಸಿದಂತೆ, ಪ್ರಕರಣವು ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ: 04.01.2013ರಂದು ವಿಚಾರಣೆಗೆ ಬರುತ್ತಿದ್ದು, ವಿಶೇಷ ನ್ಯಾಯವಾದಿ ಶ್ರೀ ಸಿ ಜಗದೀಶ್ ಇವರೊಂದಿಗೆ ಖುದ್ದಾಗಿ ಹಾಜರಾಗಬೇಕಾಗಿರುವುದರಿಂದ ಶ್ರೀ ಸಿ. ಜಗದೀಶ್, ಸರ್ಕಾರದ ವಿಶೇಷ ನ್ಯಾಯವಾದಿ ಇವರೊಂದಿಗೆ ದಿನಾಂಕ: 04.01.2013ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬರುತ್ತಿರುವ ಪ್ರಕರಣದ ಪರವಾಗಿ ಹಾಜರಾಗಲು ದಿನಾಂಕ: 03.01.2013ರವರೆಗೆ ರಿಂದ 06.01.2013ರವರೆಗೆ ನವದೆಹಲಿಗೆ ಹೋಗಿ ಬರಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ: ಸಕಇ 01 ಎಸ್‌ಎಡಿ 2013 ಬೆಂಗಳೂರು, ದಿನಾಂಕ:01.01.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಪಿಟಿಷನ್ ಸಂಖ್ಯೆ: 16751/2012ರೊಂದಿಗೆ ಜೊತೆಗೂಡಿಸಿದ ಸ್ಪೆಷಲ್ ಲೀವ್ ಪಿಟಿಷನ್ (ಸಿಆರ್‌ಎಲ್) ಸಂಖ್ಯೆ:913/2011ರ ಕುರಿತು ದಿನಾಂಕ: 04.01.2013ರಂದು ನಡೆಯಲಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ವಿಚಾರಣೆಗೆ ಹಾಜರಾಗಲು ಅಪರ ಪೊಲೀಸ್

ಮಹಾನಿರ್ದೇಶಕರು, ನಾಹಜಾನಿ ಇವರೊಂದಿಗೆ ಶ್ರೀ ಸಿ.ಜಗದೀಶ್, ವಿಶೇಷ ನ್ಯಾಯವಾದಿ ಇವರೂ ಸಹ ದಿನಾಂಕ: 03.01.2013 ರಂದು ಬೆಂಗಳೂರಿನಿಂದ ನವದೆಹಲಿಗೆ ದಿನಾಂಕ:06.01.2013ರಂದು ನವದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ತೆರಳ ಹಿಂದಿರುಗಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು (ಎ&ಇ. ಲೆಕ್ಕ ಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ರೆಸಿಡೆಂಟ್ ಕಮೀಷನರ್, ಕರ್ನಾಟಕ ಭವನ, ನವದೆಹಲಿ-ಇವರಿಗೆ ಕಳುಹಿಸುತ್ತಾ, ಸದರಿ ಅಧಿಕಾರಿಗಳಿಗೆ ಕರ್ನಾಟಕ ಭವನ, ನವದೆಹಲಿ ಇಲ್ಲಿ ದಿನಾಂಕ:03-01-2013 ರಿಂದ 06-01-2013ರ ವರೆಗೆ ಒಂದು ಕೊಠಡಿಯನ್ನು ಕಾಯ್ದಿರಿಸಲು ಕೋರಲಾಗಿದೆ.
3) ಅಪರ ಪೋಲೀಸ್ ಮಹಾ ನಿರ್ದೇಶಕರು, ನಾಹಜಾನಿ, ಬೆಂಗಳೂರು.
4) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು (ಸದರಿ ವಿಶೇಷ ನ್ಯಾಯಾಧೀಶರು ಪ್ರಯಾಣಿಸಲು ತಕ್ಷಣವೇ ಸೂಕ್ತ ಕ್ರಮವಹಿಸತಕ್ಕದ್ದು)
6) ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಭವನ, ನವದೆಹಲಿ
7) ಶ್ರೀ.ಜಗದೀಶ್, ವಿಶೇಷ ನ್ಯಾಯವಾದಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
8) ಶ್ರೀ ಶ್ರೀಧರ್.ಆರ್, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.